ಸುದ್ದಿ ಸಂಕ್ಷೇಪ

ಶನಿವಾರ 68ನೇ ಹುಟ್ಟುಹಬ್ಬ ಆಚರಿಸಿಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಕುಟುಂಬ ಸದಸ್ಯರು ಆರತಿ ಬೆಳಗಿ ಶುಭ ಕೋರಿದರು.

■ ಸಿಎಂ ಯಡಿಯೂರಪ್ಪಗೆ ಗಣ್ಯರ ಶುಭಾಶಯ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶನಿವಾರ ತಮ್ಮ 68ನೇ ಹುಟ್ಟುಹಬ್ಬ ಆಚರಿಸಿಕೊಂಡರು. ನಗರದ ರೇಸ್‌ಕೋರ್ಸ್ ರಸ್ತೆಯ ತಮ್ಮ ನಿವಾಸದಲ್ಲಿ ಸಚಿವರು, ಪಕ್ಷದ ಶಾಸಕರು ಹಾಗೂ ಅಪಾರ ಸಂಖ್ಯೆಯ ಅಭಿಮಾನಿಗಳ ಮಧ್ಯೆ ಕೇಕ್ ಕತ್ತರಿಸುವ ಮೂಲಕ ಅತ್ಯಂತ ಸರಳವಾಗಿ ಹುಟ್ಟುಹಬ್ಬ ಆಚರಿಸಿದರು. ಬೆಳಗ್ಗೆ ಸಂಜಯನಗರದಲ್ಲಿನ ರಾಧಾಕೃಷ್ಣ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಯಡಿಯೂರಪ್ಪ ತಮ್ಮ ಅಧಿಕೃತ ಪ್ರವಾಸದ ನಿಮಿತ್ತ ರಾಜ್ಯದ ವಿವಿಧ ಭಾಗಗಳಿಗೆ ಪ್ರಯಾಣ ಬೆಳೆಸಿದರು. ಹುಟ್ಟುಹಬ್ಬದ ಅಂಗವಾಗಿ ಪ್ರಧಾನಿ ಡಾ।ಮನಮೋಹನ್ ಸಿಂಗ್, ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಆಡ್ವಾಣಿ, ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ, ವೆಂಕಯ್ಯನಾಯ್ಡು, ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ, ರಾಜ್ಯದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಮೊದಲಾದವರು ದೂರವಾಣಿ ಮೂಲಕ ಯಡಿಯೂರಪ್ಪ ಅವರನ್ನು ಸಂಪರ್ಕಿಸಿ ಶುಭಾಶಯ ಕೋರಿದರು.

■ ಗೋಹತ್ಯೆ ನಿಷೇಧ ಮಸೂದೆ ಶತಸಿದ್ಧ: ಸಿಎಂ

ಚಿಕ್ಕಮಗಳೂರು: ರಾಜ್ಯದಲ್ಲಿ ಗೋಹತ್ಯೆ ನಿಷೇಧ ಮಸೂದೆ ಸಿದ್ಧಪಡಿಸಲಾಗಿದ್ದು, ಅದನ್ನು ಜಾರಿಗೆ ತರುವುದು ಶತಸಿದ್ಧ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹೇಳಿದ್ದಾರೆ. ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದಲ್ಲಿ ಶನಿವಾರ ನಡೆದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ನಿಯಂತ್ರಣದಲ್ಲಿದೆ ಎಂದರು. ಕಂದಾಯ ಮತ್ತು ಅರಣ್ಯ ಭೂಮಿ ಒತ್ತುವರಿ ಪತ್ತೆ ಹಚ್ಚಿ ವರದಿ ಸಲ್ಲಿಸಲು ಬಾಲಸುಬ್ರಮಣ್ಯ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿ ಈವರೆಗೆ ಸರ್ಕಾರಕ್ಕೆ ವರದಿ ನೀಡಿಲ್ಲ. ಆದರೆ, ಒತ್ತುವರಿಯನ್ನು ಪತ್ತೆ ಹಚ್ಚಿ ಅಂಕಿ ಅಂಶದೊಂದಿಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

■ ಬದಿಯಡ್ಕ: ಇಂದು ಚುಟುಕು ಸಾಹಿತ್ಯ ಸಮ್ಮೇಳನ



ಸಂಗಮೇಶ

ಬೆಂಗಳೂರು: ಕಾಸರಗೋಡಿನ ಬದಿಯಡ್ಕದ ಗುರು ಸದನದಲ್ಲಿ ಫೆ.28 ರಂದು ನಡೆಯುವ ತೃತೀಯ ಚುಟುಕು ಸಾಹಿತ್ಯ ಸಮ್ಮೇಳನವನ್ನು ಸಾಹಿತಿ ಸಂಗಮೇಶ ಬಾದವಾಡಗಿ ಉದ್ಘಾಟಿಸಲಿದ್ದಾರೆ. ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಏರ್ಪಡಿಸಿರುವ ಸಮ್ಮೇಳನದ ಅಧ್ಯಕ್ಷತೆಯನ್ನು ಸಾಹಿತಿ ಮತ್ತು ಅಂಕಣಕಾರ ಎಂ.ವಿ.ಭಟ್ ಮಧುರಾಂಗನ ವಹಿಸಲಿದ್ದಾರೆ. ಸಮ್ಮೇಳನದ ಅಂಗವಾಗಿ ಕಲಾ ಪ್ರದರ್ಶನ, ಹೊಸ ಕೃತಿಗಳ ಬಿಡುಗಡೆ ಕಾರ್ಯಕ್ರಮಗಳು ನಡೆಯಲಿವೆ. ಭಾನುವಾರ ಕಾರಿವಲ್, ಕನ್ನಡ ಕೈರಾಳಿ, ಗಡಿನಾಡ ಧ್ವನಿ, ಉತ್ತರದೇಶ, ಹೃದಯವಾಹಿನಿ, ಪಯಸ್ವಿನಿ ಪತ್ರಿಕೆಗಳಿಗೆ ಮಾಧ್ಯಮ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಚುಟುಕು ಸಾಹಿತ್ಯ ವಿಚಾರಗೋಷ್ಠಿ, ಉದಯೋನ್ಮುಖ ಚುಟುಕು ವಾಚನ ಸ್ಪರ್ಧೆಯನ್ನು ಸಹ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

■ ಪಿಡಿಒ ನೇಮಕಾತಿ: ಅಂತಿಮಪಟ್ಟಿಗೆ ಮತ್ತೆ ತಡೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನೇಮಕಾತಿ ಪರೀಕ್ಷೆಯ ಅಂತಿಮ ಆಯ್ಕೆ ಪಟ್ಟಿಯನ್ನು ಎರಡು ವಾರಗಳ ಕಾಲ ಪ್ರಕಟಿಸದಿರುವಂತೆ ಹೈಕೋರ್ಟ್ ಸರ್ಕಾರಕ್ಕೆ ಆದೇಶಿಸಿದೆ. ಪಿಡಿಒ ಪರೀಕ್ಷೆಯಲ್ಲಿನ ಅವ್ಯವಹಾರ ಪ್ರಶ್ನಿಸಿ ನೊಂದ ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ರಾಜ್ಯ ಉಚ್ಚ ನ್ಯಾಯಾಲಯ ಇನ್ನೆರಡು ವಾರ ಕಾಲ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸದಿರುವಂತೆ ತಡೆಯಾಜ್ಞೆ ನೀಡಿದೆ. ಇದಕ್ಕೂ ಮುನ್ನ ಫೆ.26ವರೆಗೆ ಅಂತಿಮ ಪಟ್ಟಿ ಪ್ರಕಟಿಸಬಾರದು ಎಂದು ತಡೆಯಾಜ್ಞೆ ನೀಡಿತ್ತು. ನಂತರ ಸರ್ಕಾರ ಆಯ್ಕೆ ಪಟ್ಟಿ ಪ್ರಕಟಿಸಲು ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸಿತ್ತು.

■ ಶಿವಣ್ಣ ವಿರುದ್ಧ ಬರೆಸುವಷ್ಟು ನೀಚ ನಾನಲ್ಲ

ಬೆಂಗಳೂರು:'ನಟ ಶಿವರಾಜ್‌ಕುಮಾರ್ ವಿರುದ್ಧ ಪತ್ರಿಕೆಯಲ್ಲಿ ವರದಿ ಬರೆಸುವಷ್ಟು ನೀಚ ನಾನಲ್ಲ. ಆ ಸುದ್ದಿಗೂ ನನಗೂ ಯಾವುದೇ ಸಂಬಂಧ ಇಲ್ಲ. ನಾನು ಡಾ.ರಾಜ್‌ಕುಮಾರ್‌ರ ಆಶೀರ್ವಾದದಿಂದ ಬೆಳೆದವನು. ಹಾಗಾಗಿ ಅವರ ಕುಟುಂಬಕ್ಕೆ ಮಸಿ ಬಳಿಯುವ ಕೆಲಸ ನಾನ್ಯಾಕೆ ಮಾಡಲಿ' ನಿರ್ದೇಶಕ ಓಂ ಸಾಯಿಪ್ರಕಾಶ್ ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ಪತ್ರಿಕೆಯೊಂದರಲ್ಲಿ ಬಂದ ವರದಿಗೆ ನಿರ್ದೇಶಕ ಓಂ ಸಾಯಿಪ್ರಕಾಶ್ ಪ್ರತಿಕ್ರಿಯಿಸಿದ್ದು ಹೀಗೆ. ಆತ್ಮಹತ್ಯೆಗೆ ಪ್ರಯತ್ನಿಸಿ ಪ್ರಾಣಪಾಯದಿಂದ ಪಾರಾದ ನಂತರ ಇದೇ ಮೊದಲ ಬಾರಿಗೆ ಸಮಾರಂಭವೊಂದರಲ್ಲಿ ಮಾಧ್ಯಮಗಳಿಗೆ ಎದುರಾದ ನಿರ್ದೇಶಕ ಓಂ ಸಾಯಿಪ್ರಕಾಶ್, ಎರಡು ಮೂರು ದಶಕಗಳಿಂದ ಚಿತ್ರರಂಗದಲ್ಲಿದ್ದೇನೆ. ಆದರೆ ಎಂದೂ ನನ್ನ ಸೋಲನ್ನು ಚಿತ್ರದ ನಾಯಕ, ನಾಯಕಿಯರ ಮೇಲೆ ಹಾಕಿಲ್ಲ ಎಂದರು. ನಾನು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ತಪ್ಪು. ಆದರೆ ಆತ್ಮಹತ್ಯೆ ಪ್ರಯತ್ನಕ್ಕೆ ಶಿವರಾಜ್‌ಕುಮಾರ್ ಕಾರಣರಲ್ಲ. ಆದರೆ ನನ್ನ ಗಮನಕ್ಕೆ ಬಾರದೆ ಶಿವರಾಜ್‌ಕುಮಾರ್‌ರಿಗೆ ನೋವುಂಟು ಮಾಡುವಂತಹ ವರದಿ ಮಾಡಿದ್ದಾರೆ. ಆ ಬಗ್ಗೆ ನನಗೂ ಬೇಸರವಿದೆ ಎಂದ ಓಂ ಸಾಯಿಪ್ರಕಾಶ್, ಪತ್ರಿಕೆಯೊಂದರಲ್ಲಿ ಶಿವರಾಜ್‌ಕುಮಾರ್ ವಿರುದ್ಧ ಸುದ್ದಿ ಪ್ರಕಟವಾದಾಗ ನಾನು ಊರಲ್ಲಿ ಇರಲಿಲ್ಲ. ಈ ವರದಿಯಿಂದ ಅವರಿಗೆ ಬೇಸರವಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಸದ್ಯದಲ್ಲಿ ಪತ್ರಿಕಾಗೋಷ್ಠಿ ಕರೆದು ಈ ಬಗ್ಗೆ ಸ್ಪಷ್ಟೀಕರಣ ಕೂಡಾ ಕೊಡುತ್ತೇನೆ ಎಂದು ಹೇಳಿದರು.

■ ಎಚ್.ಡಿ. ಕುಮಾರಸ್ವಾಮಿ ಮತ್ತೆ ನಿರ್ಮಾಪಕ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮತ್ತೆ ಚಿತ್ರರಂಗದತ್ತ ಮುಖ ಮಾಡಿದ್ದಾರೆ. ಈ ಮೂಲಕ ಕುಮಾರಸ್ವಾಮಿ ಮತ್ತೆ ಸಿನಿಮಾ ನಿರ್ಮಾಣಕ್ಕೆ ಬರುತ್ತಾರೆಂದು ಕೆಲ ವರ್ಷಗಳಿಂದ ಕೇಳಿ ಬರುತ್ತಿದ್ದ ಊಹಾಪೋಹಗಳಿಗೆ ಹೆಚ್ಚು ಕಮ್ಮಿ ಅಂತಿಮ ತೆರೆ ಬೀಳುವ ದಿನಗಳು ಹತ್ತಿರವಾಗಲಿವೆ. ಈ ಹಿಂದೆ ಗಲಾಟೆ ಅಳಿಯಂದ್ರು, ಸೂರ್ಯವಂಶ, ಜಿತೇಂದ್ರ, ಪ್ರೇಮೋತ್ಸವ, ಚಂದ್ರ ಚಕೋರಿ ಚಿತ್ರಗಳನ್ನು ನಿರ್ಮಿಸಿದ್ದರು. ಈಗ ಅವರ ಬಹು ದಿನಗಳ ಕನಸದ ವ್ಯಾಸರಾಯ ಬಲ್ಲಾಳರ 'ಹೆಜ್ಜೆ' ಕಾದಂಬರಿಯನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುವ ಪ್ರತಿಭಾವಂತ ನಿರ್ದೇಶಕರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ. ಆದರೆ ಈಗಾಲೇ 'ಹೆಜ್ಜೆ' ಕಾದಂಬರಿಯನ್ನು ಓದಿರುವ ಕೆಲ ನಿರ್ದೇಶಕರು ಈ ಕಾದಂಬರಿಯನ್ನು ತೆರೆಗೆ ತರಲು ಹಿಂದೇಟು ಹಾಕುತ್ತಿದ್ದಾರೆಂಬ ಸುದ್ದಿ ಕೇಳಿ ಬರುತ್ತಿದೆ. ಕಾದಂಬರಿಯನ್ನು ತಮ್ಮ ಕೈಯಿಂದ ಸಿನಿಮಾ ಮಾಡಲು ಸಾಧ್ಯವೆ? ಎಂಬ ಪ್ರಶ್ನೆ ಕೆಲ ನಿರ್ದೇಶಕರಿಗೆ ಎದುರಾಗಿದ್ದು, 'ಹೆಜ್ಜೆ' ಸಿನಿಮಾ ರೂಪ ಪಡೆದುಕೊಳ್ಳಲು ತಡವಾಗುತ್ತಿದೆ ಎನ್ನಲಾಗುತ್ತಿದೆ. 'ನಾನು ರಾಜಕೀಯಕ್ಕೆ ಹೋದ ಮೇಲೆ ಸಿನಿಮಾರಂಗವನ್ನು ಸಂಪೂರ್ಣವಾಗಿ ಮರೆತು ಹೋಗಿದ್ದೆ. ಆದರೆ ಈಗ ಮತ್ತೆ ನಾನು 'ಹೆಜ್ಜೆ' ಕಾದಂಬರಿಯನ್ನು ಓದುತ್ತಿದ್ದು, ಈ ಕಾದಂಬರಿಗೆ ಸಿನಿಮಾ ರೂಪ ಕೊಡುವ ನಿರ್ದೇಶಕರಿಗಾಗಿ ಹುಡುಕುತ್ತಿದ್ದೇನೆ. ಈಗಾಗಲೇ ಕೆಲ ನಿರ್ದೇಶಕರನ್ನು ಸಂಪರ್ಕಿಸಿದ್ದೇನೆ. ಸದ್ಯದಲ್ಲೇ ಈ ಕಾದಂಬರಿ ಸಿನಿಮಾ ರೂಪ ಪಡೆದುಕೊಳ್ಳಲಿದೆ' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ 'ಕನ್ನಡಪ್ರಭ'ಕ್ಕೆ ತಿಳಿಸಿದ್ದಾರೆ.

■ 1 ಕೋಟಿ ರು. ಮೌಲ್ಯದ ಹೆರಾಯಿನ್ ವಶ

ವಿರಾಜಪೇಟೆ: ಅಕ್ರಮವಾಗಿ 1 ಕೋಟಿ ರು.ಗೂ ಅಧಿಕ ಮೌಲ್ಯದ ಹೆರಾಯಿನ್ ಮಾರಾಟ ಮಾಡಲು ವಹಿವಾಟು ನಡೆಸುತ್ತಿದ್ದ ಐವರು ಆರೋಪಿಗಳನ್ನು ಗೋಣಿಕೊಪ್ಪಲಿನ ವಸತಿಗೃಹವೊಂದರಲ್ಲಿ ಬಂಧಿಸುವಲ್ಲಿ ವಿರಾಜಪೇಟೆ ಪೊಲೀಸರು ಸಫಲರಾಗಿದ್ದಾರೆ. ತಮಿಳುನಾಡು ಮೂಲದ ಪಾಂಡ್ಯನ್, ಗೋಪಾಲ್, ಕುಮಾರೇಶ್, ಗೋಣಿಕೊಪ್ಪಲುವಿನ ಉಮೇಶ್, ರಮೇಶ್ ಎಂಬುವವರು ಪೊನ್ನಂಪೇಟೆ ರಸ್ತೆಯ ವಸತಿ ಗೃಹವೊಂದರಲ್ಲಿ ತಂಗಿದ್ದ ಮೈಸೂರು ಮೂಲದ ಮೋಹನ್ ಕುಮಾರ್ ಎಂಬಾತನಿಗೆ 780 ಗ್ರಾಂ ಹೆರಾಯಿನ್ ಮಾರುವ ಸಂಬಂಧಿತ ಮಾತುಕತೆ ನಡೆಸಿದ್ದರು. ಪೊಲೀಸರು ವಸತಿಗೃಹದ ಮೇಲೆ ದಾಳಿ ನಡೆಸಿ ಅಲ್ಲಿದ್ದ ಐವರು ಆರೋಪಿಗಳಾದ ಪಾಂಡ್ಯನ್, ಗೋಪಾಲ್, ಕುಮಾರೇಶ್, ಉಮೇಶ್, ರಮೇಶ್ ಎಂಬುವವರನ್ನು ಬಂಧಿಸಿದ್ದಾರೆ. ಅವರೊಂದಿಗಿದ್ದ 780 ಗ್ರಾಂ ಹೆರಾಯಿನ್ ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಇದರ ಅಂತಾರಾಷ್ಟ್ರೀಯ ಮಾರುಕಟ್ಟೆ ಮೌಲ್ಯ 1 ಕೋಟಿ ರು.ಗೂ ಅಧಿಕ ಎನ್ನಲಾಗಿದೆ.

3 ತಿಂಗಳಲ್ಲಿ ಹೊಸ ರೈಲು

■ 6 ತಿಂಗಳಲ್ಲಿ ಸಮೀಕ್ಷೆ ಪೂರ್ಣ ■ ರಾಜ್ಯದ ಸಹಭಾಗಿತ್ವ ಹೆಚ್ಚು ಯೋಜನೆ ಲಭಿಸಲು ಕಾರಣ ■

ರೇಲ್ವೆ ಖಾತೆ ರಾಜ್ಯ ಸಚಿವ ಕೆ.ಎಚ್.ಮುನಿಯಪ್ಪ ಬೆಂಗಳೂರಿನಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡರು.

ಬೆಂಗಳೂರು: ರೈಲ್ವೇ ಬಜೆಟ್‌ನಲ್ಲಿ ಪ್ರಕಟಿಸಿರುವ ರಾಜ್ಯದ 12 ನೂತನ ಮಾರ್ಗಗಳ ಸಮೀಕ್ಷೆ ಕಾರ್ಯ ಮುಂದಿನ ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ.

ಆದರೆ, ಹೊಸ ರೈಲುಗಳ ಸಂಚಾರಕ್ಕೆ ಇನ್ನೂ ಮೂರು ತಿಂಗಳಾಗುತ್ತದೆ.

ಬೆಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈಲ್ವೇ ಖಾತೆ ರಾಜ್ಯ ಸಚಿವ ಕೆ.ಎಚ್. ಮುನಿಯಪ್ಪ, ಹಲವಾರು ಯೋಜನೆಗಳ ನಿರ್ಮಾಣ ವೆಚ್ಚದಲ್ಲಿ ಸಮಪಾಲು ಭರಿಸುವುದಾಗಿ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮುಂದೆ ಬಂದಿದ್ದರಿಂದ ಕರ್ನಾಟಕಕ್ಕೆ ಹೆಚ್ಚು ಯೋಜನೆಗಳು ಲಭಿಸುವಂತಾಯಿತು ಎಂದರು.

ರಾಜ್ಯದ ಸಂಸದರು ಮತ್ತು ಇತರೆ ಸಂಘ ಸಂಸ್ಥೆಗಳು ಸಲ್ಲಿಸಿದ್ದ ಬೇಡಿಕೆಗಳಲ್ಲಿ ಬಹುಪಾಲನ್ನು ಈಡೇರಿಸಿದಂತಹ ಬಜೆಟ್ ಇದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ರೈಲ್ವೇ ನಿಯಮಗಳ ಪ್ರಕಾರ ಸಮೀಕ್ಷೆಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಬೇಕು. ಈ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಪ್ರಕಟಿಸಿರುವ ನೂತನ ಮಾರ್ಗಗಳ ಸಮೀಕ್ಷೆ ಕಾರ್ಯವನ್ನು ಸದ್ಯದಲ್ಲೇ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

1163 ಕಿಲೋಮೀಟರ್ ಉದ್ದದ 12 ಮಾರ್ಗಗಳ ಈ ಸಮೀಕ್ಷೆ ಕಾರ್ಯಕ್ಕಾಗಿ 348.90 ಕೋಟಿ ರುಪಾಯಿ ಅನುದಾನ ಮೀಸಲಿಡಲಾಗಿದೆ.

■ ರಾಜ್ಯದ ಸಹಭಾಗಿತ್ವ: ಹಾಸನ–ಬೆಂಗಳೂರು, ಕಡೂರು–ಚಿಕ್ಕಮಗಳೂರು, ಅರಸೀಕೆರೆ–ಬೀರೂರು (ಡಬ್ಲಿಂಗ್) ಮತ್ತು ಕೋಲಾರ–ಚಿಕ್ಕಬಳ್ಳಾಪುರ ಗೇಜ್ ಪರಿವರ್ತನೆ ಕಾರ್ಯಕ್ಕೆ ರೇಲ್ವೆ ಇಲಾಖೆ 480 ಕೋಟಿ ರುಪಾಯಿ ವೆಚ್ಚ ಮಾಡಲಿದ್ದು, ರಾಜ್ಯ ಸರ್ಕಾರವೂ 480 ಕೋಟಿ ರುಪಾಯಿಗಳನ್ನು ವ್ಯಯ ಮಾಡಲು ಮುಂದೆ ಬಂದಿದೆ.

ಈ ಪೈಕಿ ಕಡೂರು– ಚಿಕ್ಕಮಗಳೂರು ಮಾರ್ಗಕ್ಕೆ ಬಜೆಟ್‌ನಲ್ಲಿ 40 ಕೋಟಿ ರುಪಾಯಿ ಮೀಸಲಿಟ್ಟಿದ್ದು, ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ.

ಅದೇ ರೀತಿ ಬಾಗಲಕೋಟೆ–ಕುಡಚಿ, ವೈಟ್‌ಫೀಲ್ಡ್–ಕೋಲಾರ, ತುಮಕೂರು–ದಾವಣಗೆರೆ, ಗದಗ–ಹಾವೇರಿ ಮತ್ತು ಶಿವಮೊಗ್ಗ–ಹರಿಹರ ಮಾರ್ಗಗಳ ನಿರ್ಮಾಣ ಕಾಮಗಾರಿಗೂ ರಾಜ್ಯ ಸರ್ಕಾರ ಅರ್ಧ ಪಾಲು ಹಣವನ್ನು ನೀಡಲಿದೆ. ಇದರ ಜತೆಗೆ ಈ ಯೋಜನೆಗಳಿಗೆ ಅಗತ್ಯವಿರುವ 2411 ಹೆಕ್ಟೇರ್ ಭೂಮಿಯನ್ನು ಉಚಿತವಾಗಿ ನೀಡಲಿದೆ.

ಕುಡಚಿ–ಬಾಗಲಕೋಟೆ ಮಾರ್ಗಕ್ಕೆ ಬಜೆಟ್‌ನಲ್ಲಿ ಕೇವಲ 4 ಕೋಟಿ ರುಪಾಯಿ ತೆಗೆದಿರಿಸಿದ್ದರೂ ಹಣಕಾಸು ಇತಿಮಿತಿ ನೋಡಿಕೊಂಡು ಮತ್ತಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ಮುನಿಯಪ್ಪ ತಿಳಿಸಿದರು.

■ ಸಾರ್ವಜನಿಕ ಸಹಭಾಗಿತ್ವ: ತಾಳಗುಪ್ಪ–ಹೊನ್ನಾವರ, ಬಿಜಾಪುರ–ಶಹಬಾದ್ ಮತ್ತು ಧಾರವಾಡ–ಬೆಳಗಾವಿ ಮಾರ್ಗದ ಕಾಮಗಾರಿಯನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ. ಇದಕ್ಕಾಗಿ 2212 ಕೋಟಿ ರುಪಾಯಿ ವೆಚ್ಚವಾಗುವ ನಿರೀಕ್ಷೆ ಇದೆ. ಆದರೆ, ಈ ಯೋಜನೆಗಳ ರೂಪುರೇಶೆಯನ್ನು ಸಿದ್ಧಪಡಿಸಲಾಗುತ್ತಿದೆ.

ಹೊಸದುರ್ಗ ರೋಡ್–ಚಿಕ್ಕಜಾಜೂರು, ಹೊಸಪೇಟೆ–ಹುಬ್ಬಳ್ಳಿ–ಲೋಂಡಾ–ವಾಸ್ಕೋ, ಬೀರೂರು–ಶಿವನಿ ಮಾರ್ಗಗಳನ್ನು ಡಬ್ಲಿಂಗ್ ಮತ್ತು ಶೋರಾಪುರ–ಮಂಗಳೂರು–ಪಣಂಬೂರು ಮಾರ್ಗವನ್ನು ವಿದ್ಯುದೀಕರಣಗೊಳಿಸಲು ನಿರ್ಧರಿಸಲಾಗಿದೆ.

ಮುಂದಿನ 6–8 ತಿಂಗಳಲ್ಲಿ ಅನುಮೋದನೆ ಪಡೆದು ರಾಜ್ಯ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳ ಕಾಮಗಾರಿಯನ್ನು ಆರಂಭಿಸಲಾಗುತ್ತದೆ.

■ ಹೊಸ ರೈಲು ಸಂಚಾರ ತಡ: ಕಳೆದ ಬಜೆಟ್‌ನಲ್ಲಿ ಮುಂಬೈ–ಕಾರವಾರದ ವರೆಗೆ ಸಂಚರಿಸುತ್ತಿದ್ದ ರೈಲನ್ನು ಮಂಗಳೂರಿನವರೆಗೆ ವಿಸ್ತರಣೆ ಮಾಡಲು ಮತ್ತು ಬೆಂಗಳೂರಿನಿಂದ ನವದೆಹಲಿಗೆ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಪ್ರಕಟಿಸಲಾಗಿತ್ತು. ಆದರೆ, ಇನ್ನೂ ಕಾರ್ಯಗತಕ್ಕೆ ಬಂದಿಲ್ಲ. ಸದ್ಯದಲ್ಲೇ ಈ ಎರಡೂ ರೈಲು ಸಂಚಾರ ಆರಂಭಿಸಲಾಗುತ್ತದೆ. ಆದರೆ, ಹೊಸದಾಗಿ ಪ್ರಕಟಿಸಿರುವ 10 ಕ್ಕೂ ಹೆಚ್ಚು ನೂತನ ರೈಲುಗಳ ಸಂಚಾರವನ್ನು 2–3 ತಿಂಗಳಲ್ಲಿ ಆರಂಭಿಸಲಾಗುವುದು ಎಂದು ಅವರು ಹೇಳಿದರು.

■ ತಿಂಗಳಲ್ಲಿ ಲೋಕಲ್ ರೈಲು: ರಾಜಧಾನಿ ಬೆಂಗಳೂರಿನಿಂದ ಆನೇಕಲ್ ಮತ್ತು ದೇವನಹಳ್ಳಿಗೆ ಮಾರ್ಚ್ 31 ರೊಳಗೆ ಸ್ಥಳೀಯ ರೈಲು ಸಂಚಾರ ಆರಂಭಿಸಲಾಗುವುದು ಎಂದು ಮುನಿಯಪ್ಪ ತಿಳಿಸಿದರು.

ಆರು ತಿಂಗಳಲ್ಲಿ ಪೂರ್ಣಗೊಳ್ಳಲಿರುವ ಮಾರ್ಗಗಳು...

- ■ ಬಿಜಾಪುರ–ಅಥಣಿ–ಶೆಡ್‌ಬಾಳ್
- ■ ಚಿಕ್ಕಬಳ್ಳಾಪುರ–ಗೌರಿಬಿದನೂರು
- ■ ಪಡುಬಿದ್ರಿ–ಕಾರ್ಕಳ–ಬೆಳ್ತಂಗಡಿ–ಧರ್ಮಸ್ಥಳ–ನೆಟ್ಟಣ
- ■ ಬೈಂದೂರು–ಕೊಲ್ಲೂರು–ಹಾಲಾಡಿ–ಹೆಬ್ರಿ–ಕಾರ್ಕಳ–ಮೂಡಬಿದ್ರಿ–ವೇಣೂರು–ಬೆಳ್ತಂಗಡಿ–ಧರ್ಮಸ್ಥಳ–ನೆಟ್ಟಣ
- ■ ಬೇಲೂರು–ಶೃಂಗೇರಿ
- ■ ಮೈಸೂರು–ಕುಶಾಲನಗರ–ಮಡಿಕೇರಿ
- ■ ಬೆಳಗಾವಿ–ಬಾಗಲಕೋಟೆ–ರಾಯಚೂರು
- ■ ಬೆಳಗಾವಿ–ಸಾಮಂತವಾಡಿ
- ■ ಕೃಷ್ಣಗಿರಿ–ಚಾಮರಾಜನಗರ
- ■ ಗದಗ–ಹರಿಹರ
- ■ ತಾಳ್ವೇರ್–ಮೈಸೂರು
- ■ ಮಡಿಕೇರಿ–ಮಂಗಳೂರು

ಹುಬ್ಬಳ್ಳಿ–ಅಂಕೋಲ ಸೇರಿದಂತೆ ಪರಿಸರಕ್ಕೆ ಸಂಬಂಧಿಸಿದ ತೊಡಕುಗಳಿರುವ ಮೂರು ಯೋಜನೆಗಳ ಬಗ್ಗೆ ಅಧ್ಯಯನ ನಡೆಸಲು ಕೊಂಕಣ ರೈಲ್ವೇ ಮತ್ತು ದೆಹಲಿ ಮೆಟ್ರೋ ರೈಲು ರೂವಾರಿ ಶ್ರೀಧರನ್ ನೇತೃತ್ವದ ಸಮಿತಿಯನ್ನು ರಾಜ್ಯಕ್ಕೆ ಕಳುಹಿಸಲು ಪರಿಸರ ಖಾತೆ ಸಚಿವ ಜೈರಾಂ ರಮೇಶ್ ಸಮ್ಮತಿ ಸೂಚಿಸಿದ್ದಾರೆ. ಈ ಸಮಿತಿ ನೀಡುವ ವರದಿ ಆಧರಿಸಿ ಯೋಜನೆ ಕಾರ್ಯಗತಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ತಿಳಿಸಿದರು.

ಆದಿಚುಂಚನಗಿರಿ ಶ್ರೀಗಳಿಗೆ ಸರ್ಕಾರ ಋಣಿ: ಸಿಎಂ

■ ಸರ್ವಧರ್ಮ ಸಮ್ಮೇಳನ ಉದ್ಘಾಟನೆ ■ ನೆರೆ ಸಂತ್ರಸ್ತರ ಮನೆ ನಿರ್ಮಾಣಕ್ಕೆ ಶ್ರೀಗಳಿಂದ 10 ಕೋಟಿ ರು.

ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಲು ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮೀಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ 10 ಕೋಟಿ ರು. ಚೆಕ್ ನೀಡಿದರು. ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಕಾರ್ಮಿಕ ಸಚಿವ ಬಿ.ಎನ್.ಬಚ್ಚೇಗೌಡ ಮತ್ತಿತರರಿದ್ದಾರೆ.

ಆದಿಚುಂಚನಗಿರಿ/ಮಂಡ್ಯ: ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗಾಗಿ 5 ಸಾವಿರ ಮನೆಗಳನ್ನು ನಿರ್ಮಿಸಲು ನೆರವು ನೀಡಿದ ಆದಿಚುಂಚನಗಿರಿಯ ಶ್ರೀಗಳಿಗೆ ಸರ್ಕಾರ ಋಣಿಯಾಗಿರುತ್ತದೆ ಎಂದು ಮುಖ್ಯಮಂತ್ರಿ ಬಿ.ಎಸ್.ಎಸ್.ಯಡಿಯೂರಪ್ಪ ಶನಿವಾರ ಹೇಳಿದರು.

ಆದಿಚುಂಚನಗಿರಿಯ ಬಿಜಿಎಸ್ ಸಭಾಂಗಣದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಚುಂಚನಗಿರಿ ಶ್ರೀಗಳಿಂದ 10 ಕೋಟಿ ರು.ಗಳ ಚೆಕ್ ಪಡೆದುಕೊಂಡು ಮಾತನಾಡಿದ ಅವರು, ಚುಂಚನಗಿರಿ ಶ್ರೀಗಳಿಗೆ ನೆರೆ ಸಂತ್ರಸ್ತರಿಗಾಗಿ ಮನೆ ನಿರ್ಮಿಸಿ ಕೊಡುವ ಆಸೆ ಇತ್ತು. ಆದರೆ, ಅನಾರೋಗ್ಯದ ಕಾರಣದಿಂದಾಗಿ ಸರ್ಕಾರದ ಮೇಲೆ ಭರವಸೆ ಇಟ್ಟು 5 ಸಾವಿರ ಮನೆಗಳನ್ನು ನಿರ್ಮಿಸಲು 50 ಕೋಟಿ ರು.ಗಳನ್ನು ನೀಡುವುದಾಗಿ ವಾಗ್ದಾನ ಮಾಡಿದ್ದಾರೆ. ಅದರಂತೆ ಮೊದಲ ಕಂತಾಗಿ 10 ಕೋಟಿ ರು. ಸರ್ಕಾರಕ್ಕೆ ನೀಡಿದ್ದಾರೆ ಎಂದರು.

■ ಇತರ ಮಠಾಧೀಶರಿಗೂ ಪ್ರೇರಣೆ: ಆದಿಚುಂಚನಗಿರಿ ಶ್ರೀಗಳು ನೆರೆ ಸಂತ್ರಸ್ತರಿಗಾಗಿ ಹಾಕಿಕೊಟ್ಟಿರುವ ಈ ಮಾರ್ಗ ರಾಜ್ಯದ ಇತರ ಮಠಾಧೀಶರಿಗೂ ಪ್ರೇರಣೆಯಾಗಿದೆ. ನೆರೆ ಸಂತ್ರಸ್ತರಿಗಾಗಿ ಶ್ರೀಗಳು ತೋರಿದ ಔದಾರ್ಯ, ಸಹೃದಯತೆ ಸರ್ಕಾರ ಸ್ಮರಿಸುವುದರ ಜೊತೆಗೆ ಮಾದರಿ ಗ್ರಾಮಗಳನ್ನು ನಿರ್ಮಿಸಲಾಗುವುದು. ಶ್ರೀಗಳು ತಮ್ಮ ಶಿಷ್ಯರನ್ನು ಬಿಟ್ಟು ಉಸ್ತುವಾರಿ ಮಾಡಿಸಬಹುದಾಗಿದೆ ಎಂದರು.

ಆದಿಚಂಚನಗಿರಿ ಮಠದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಪ್ರತಿವರ್ಷ ನಡೆಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಇದು ಬಹುದೊಡ್ಡ ಧಾರ್ಮಿಕರ ಪರಂಪರೆ ಎಂದು ಮುಖ್ಯಮಂತ್ರಿಗಳು ಬಣ್ಣಿಸಿದರು.

ಸಮಾಜ ಸುಧಾರಣೆ ಬಗ್ಗೆ ಜಾಗೃತಿ ಮೂಡಿಸುವ ಇಂತಹ ಕಾರ್ಯಕ್ರಮಗಳು ಅನುಕರಣೀಯ. ಹೀಗಾಗಿ ಶ್ರೀಗಳಿಗೆ ಕೇಂದ್ರ ಸರ್ಕಾರ ಈ ಬಾರಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿರುವುದು ಸೂಕ್ತ ನಿರ್ಧಾರವಾಗಿದೆ ಎಂದರು.

■ ಗೋಹತ್ಯೆ ನಿಷೇಧ: ಗೋ ಸಂರಕ್ಷಣೆ ಬಗ್ಗೆ ಯಾವಾಗಲೂ ಕಾಳಜಿ ತೋರುವ ಶ್ರೀಗಳು ಗೋಹತ್ಯೆ ನಿಷೇಧವನ್ನು ಬೆಂಬಲಿಸಿದ್ದಾರೆ. ಅವರ ಸಹಕಾರ ಮತ್ತು ಆಶೀರ್ವಾದದಿಂದ ಈ ಕಾನೂನು ಜಾರಿಗೆ ಬರಲಿದೆ ಎಂದರು.

ಇದೇ ಸಂದರ್ಭದಲ್ಲಿ ಆದಿಚುಂಚನಗಿರಿ ಕ್ಷೇತ್ರವನ್ನು ಪ್ರವಾಸೋದ್ಯಮ ಕ್ಷೇತ್ರಕ್ಕೆ ಸೇರಿಸಲು ಸರ್ಕಾರ ಸಂಪೂರ್ಣ ಸಹಕಾರ ಇದೆ ಎಂದರು.

■ ಜನಪರ ಆಡಳಿತ ನೀಡಿ: ಪದ್ಮಭೂಷಣ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಆಶೀರ್ವಚನ ನೀಡಿ, ಮುಖ್ಯಮಂತ್ರಿಗಳು ಮಠ –ಮಾನ್ಯಗಳ ಬಗ್ಗೆ ಬಹಳಷ್ಟು ಗೌರವ ಹೊಂದಿದ್ದಾರೆ. ಇದೇ ರೀತಿ ಮಠ –ಮಾನ್ಯಗಳ ಉಳಿವು, ಬೆಳವಣಿಗೆಗೆ ಸದಾ ಸ್ಪಂದಿಸಬೇಕು. ಜನಪರವಾಗಿ ಆಡಳಿತ ನಡೆಸಿ ಅಭಿವೃದ್ಧಿಗೆ ಪೂರಕವಾದ ಹೆಜ್ಜೆ ಇಡಬೇಕು. ಜನರು ಸಹ ಕೆಟ್ಟ ಕೆಲಸಗಳಿಂದ ದೂರ ಇದ್ದು, ಸನ್ಮಾರ್ಗದಲ್ಲಿ ನಡೆಯಬೇಕು. ಉತ್ತಮ ನಡವಳಿಕೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

■ ಪಂಚಾಂಗ–ಸಿಡಿ ಬಿಡುಗಡೆ: ಆದಿಚುಂಚನಗಿರಿ ಮಠದಿಂದ ಹೊರತರಲಾಗಿರುವ ಪಂಚಾಂಗ ಮತ್ತು ಆದಿಚುಂಚನಗಿರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಸಿಡಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಡಾ.ಎಜಾಸುದ್ದೀನ್ ಇಸ್ಲಾಂ ಧರ್ಮದ ಬಗ್ಗೆ, ಕ್ರೈಸ್ತ ಧರ್ಮದ ಗುರು ನರೋನಾ ಅವರು ಕ್ರೈಸ್ತ ಧರ್ಮದ ಬಗ್ಗೆ ಧರ್ಮ ಬೋಧನೆ ಮಾಡಿದರು.

ಸಮ್ಮೇಳನದಲ್ಲಿ ಜಿಲ್ಲಾ ಮಂತ್ರಿ ರಾಮಚಂದ್ರಗೌಡ, ಸಚಿವರಾದ ರೇಣುಕಾಚಾರ್ಯ, ಮುರುಗೇಶ ನಿರಾಣಿ, ಬಿ.ಎನ್.ಬಚ್ಚೇಗೌಡ, ಶಾಸಕ ಕೆ.ಸುರೇಶ್ ಗೌಡ, ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉಪಸ್ಥಿತರಿದ್ದರು.

ಎಂವಿಕೆಗೆ ವಿ. ಶಾಂತಾರಾಂ ಪ್ರಶಸ್ತಿ ಪ್ರದಾನ

ಬೆಂಗಳೂರು: ಹಿರಿಯ ಛಾಯಾಗ್ರಾಹಕ ಹಾಗೂ ಚಿತ್ರ ನಿರ್ದೇಶಕ ಎಂ.ವಿ. ಕೃಷ್ಣಸ್ವಾಮಿ ಅವರಿಗೆ ಜೀವಮಾನ ಸಾಧನೆಗಾಗಿ ಘೋಷಣೆಯಾಗಿದ್ದ ಪ್ರತಿಷ್ಠಿತ ವಿ. ಶಾಂತಾರಾಂ ಪ್ರಶಸ್ತಿ ಕೊನೆಗೂ ಅವರ ಮಡಿಲು ಸೇರಿದೆ.

5 ಲಕ್ಷ ರು., ಚಿನ್ನದ ಶಂಖವನ್ನು ಒಳಗೊಂಡ ಪ್ರಶಸ್ತಿ ನೀಡಿ ಸನ್ಮಾನ

ಶನಿವಾರ ಬೆಳಗ್ಗೆ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಅವರ ನಿವಾಸದ ಮುಂದೆ ನಡೆದ ಸಮಾರಂಭದಲ್ಲಿ ಮುಂಬೈ ಅಂತಾರಾಷ್ಟ್ರೀಯ 11ನೇ ಚಿತ್ರೋತ್ಸವದ ನಿರ್ದೇಶಕ ಕುಲದೀಪ್ ಸಿನ್ಹಾ, ಎಂವಿಕೆ ಅವರ ನಿವಾಸಕ್ಕೆ ತೆರಳಿ 5 ಲಕ್ಷ ರು. ಹಾಗೂ ಚಿನ್ನದ ಶಂಖವನ್ನೊಳಗೊಂಡ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಕುಲದೀಪ್ ಸಿನ್ಹಾ, ಮುಂಬೈನಲ್ಲಿ ನಡೆದ ಚಲನಚಿತ್ರೋತ್ಸವಕ್ಕೆ ಕೃಷ್ಣಸ್ವಾಮಿ ಅವರು ಅನಾರೋಗ್ಯದ ಕಾರಣ ಬಾರದೆ ಇರುವುದಕ್ಕೆ ನಾವೇ ಅವರ ನಿವಾಸಕ್ಕೆ ಬಂದು ಪ್ರಶಸ್ತಿ ನೀಡಿ ಗೌರವಿಸಬೇಕೆಂದು ನಿರ್ಧಾರ ಮಾಡಿ ಈಗ ಘೋಷಣೆಯಂತೆ ಪ್ರಶಸ್ತಿಯನ್ನು ಅವರಿಗೆ ತಲುಪಿಸಿದ್ದೇವೆ ಎಂದರು. ಎಂ.ವಿ. ಕೃಷ್ಣಸ್ವಾಮಿ ಅವರ ಸಾಧನೆಯನ್ನು ಅಭಿನಂದಿಸಿ ಮಾತನಾಡಿದ ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ. ಜಯಮಾಲ, ಕನ್ನಡಿಗರಿಗೆ ಈ ಪ್ರಶಸ್ತಿ ಬಂದಿರುವುದು ಹೆಮ್ಮೆಯ ಸಂಗತಿ. ಎಂವಿಕೆ ಸೇರಿದಂತೆ ಹಲವು ಸಾಧಕರನ್ನು ಸನ್ಮಾನ ಮಾಡಿ ಅಭಿನಂದಿಸುವ ಕಾರ್ಯಕ್ರಮವನ್ನು ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಮುಂದಿನ ತಿಂಗಳು 9 ರಂದು ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ಕೇಂದ್ರ ಸೆನ್ಸಾರ್ ಮಂಡಳಿ ಅಧ್ಯಕ್ಷ ಬಸವರಾಜ್, ನಿರ್ದೇಶಕ ಭಗವಾನ್, ಓಂ ಸಾಯಿಪ್ರಕಾಶ್, ನಿರ್ಮಾಪಕರಾದ ಚಿನ್ನೇಗೌಡ ಉಪಸ್ಥಿತರಿದ್ದರು.

ಶ್ರೀಕೃಷ್ಣದೇವರಾಯ ವಿವಿಗೆ ಇಂದು ಚಾಲನೆ

ಬಳ್ಳಾರಿ: ರಾಜ್ಯ ಪ್ರವಾಸೋದ್ಯಮ ಸಚಿವ ಜನಾರ್ದನ ರೆಡ್ಡಿ ಕನಸಿನ ಕೂಸಾದ ಬಳ್ಳಾರಿ–ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡ, 'ವಿಜಯನಗರ ಶ್ರೀಕೃಷ್ಣದೇವರಾಯ' ಹೆಸರಿನ ನೂತನ ವಿಶ್ವವಿದ್ಯಾಲಯ ಸ್ಥಾಪನೆ ಇದೀಗ ನನಸಾಗಿದೆ.

ಹೆಸರಿನ ಕುರಿತು ಮೊದಲು ಕೇಳಿಬಂದ ಆಕ್ಷೇಪಗಳ ಮಧ್ಯೆಯೂ ಫೆ.28ರ ಭಾನುವಾರ ನೂತನ ವಿವಿ 'ಪಟ್ಟಾಭಿಷೇಕ'ದ ಸಂಭ್ರಮಕ್ಕೆ ಸಿದ್ಧವಾಗಿದೆ.

ಬಳ್ಳಾರಿ ನಗರದ ಹೊರವಲಯದಲ್ಲಿರುವ, ಅಲ್ಲೀಪೂರ ಸಮೀಪದ ಸ್ನಾತಕೋತ್ತರ ಕೇಂದ್ರದಲ್ಲಿ ಫೆ.28ರಂದು ನೂತನ ವಿವಿ ಕಾರ್ಯಾರಂಭಗೊಳ್ಳಲಿದ್ದು, ಹಂತ ಹಂತವಾಗಿ ವಿವಿಯ ಅಭಿವೃದ್ಧಿಗೆ ಸರ್ಕಾರ ಕಾರ್ಯಪ್ರವೃತ್ತವಾಗಲಿದೆ. ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ 84 ಕಾಲೇಜುಗಳನ್ನು ತನ್ನ ವ್ಯಾಪ್ತಿಗೆ ಪಡೆಯಲಿರುವ 'ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಈಗಾಗಲೇ ವಿಶೇಷಾಧಿಕಾರಿಯಾಗಿ ಸೈಯ್ಯದ್ ಅಬ್ದುಲ್ ಬಾರಿ ಶುಕ್ರವಾರವಷ್ಟೇ ಅಧಿಕಾರ ವಹಿಸಿಕೊಂಡಿದ್ದಾರೆ.

ಭಾನುವಾರದಿಂದ ಅಧಿಕೃತವಾಗಿ ಕಾರ್ಯಾರಂಭಗೊಳ್ಳಲಿರುವ ನೂತನ ವಿವಿ (ಪಿಜಿ ಸೆಂಟರ್) ವ್ಯವಸ್ಥೆಗಳನ್ನು ಪರಿಶೀಲಿಸಲು ಶನಿವಾರ ಸ್ಥಳಕ್ಕೆ ಭೇಟಿ ನೀಡಿದ್ದ ರಾಜ್ಯ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜನಾರ್ದನ ರೆಡ್ಡಿ ಅವರು ಜಿಲ್ಲೆಯ ಹೆಮ್ಮೆಗೆ ಪಾತ್ರವಾಗಲಿರುವ ನೂತನ ವಿವಿ ಅಭಿವೃದ್ಧಿ ಕುರಿತು ಶಿಕ್ಷಣ ತಜ್ಞರು, ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತಿತರರ ಜೊತೆ ಚಿಂತನ– ಮಂಥನ ನಡೆಸಿದರು.

ನಕ್ಸಲ್ ಹಾವಳಿ ಮನವರಿಕೆ ಮಾಡಿಲ್ಲ: ಡಿವಿಎಸ್

ಹಾಸನ: ರಾಜ್ಯದಲ್ಲಿ ಇರುವ ನಕ್ಸಲ್ ಹಾವಳಿ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇದರಿಂದ ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಗೆ ಹಿನ್ನೆಡೆ ಆಗಿದೆ. ಹೀಗೆ ಟೀಕಿಸಿ, ಅಸಮಾಧಾನ ವ್ಯಕ್ತಪಡಿಸಿದವರು ಕಟ್ಟಾ ವಿರೋಧಪಕ್ಷದವರಲ್ಲ.

ರಾಜ್ಯದಲ್ಲಿ ಆಡಳಿತ ಪಕ್ಷವಾದ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಹಾಲಿ ಸಂಸದ ಸದಾನಂದಗೌಡರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ರಾಜ್ಯದಲ್ಲಿ ಇರುವ ನಕ್ಸಲ್ ಸಮಸ್ಯೆ ಬಗ್ಗೆ ಸರಿಯಾಗಿ ಮನವರಿಕೆ ಮಾಡಿಕೊಡದ ಕಾರಣ, ಕೇಂದ್ರ ಸರ್ಕಾರ ನಕ್ಸಲ್ ಪೀಡಿತ ರಾಜ್ಯಗಳ ಸಭೆಗಳಿಗೆ ಕರ್ನಾಟಕವನ್ನು ಆಹ್ವಾನಿಸುತ್ತಿಲ್ಲ.

ಇದರಿಂದ ಕರ್ನಾಟಕದಲ್ಲಿ ಅಲ್ಲಲ್ಲಿ ಕಂಡು ಬರುವ ನಕ್ಸಲ್ ಸಮಸ್ಯೆ ಇರುವ ಪ್ರದೇಶಗಳ ಜನರಿಗೆ ನೆರವು ನೀಡಲು ನೀಡುವ 100 ಕೋಟಿ ರು.ಗಳನ್ನು ಪಡೆಯದಂತೆ ಆಗಿದೆ ಎಂದು ವಿಷಾದಿಸಿದರು. ತಾವು ಮತ್ತು ಗೃಹ ಸಚಿವ ಡಾ.ವಿ.ಎಸ್.ಆಚಾರ್ಯರವರು ಕೇಂದ್ರ ಗೃಹ ಸಚಿವ ಪಿ.ಚಿದಂಬರಂ ಅವರನ್ನು ಭೇಟಿ ಮಾಡಿ, ನಕ್ಸಲ್ ಸಮಸ್ಯೆ ಬಗ್ಗೆ ವಿವರಿಸುವುದಾಗಿ ಅವರು ಹೇಳಿದರು.

■ ಕೆಎಂಎಫ್ ಅಧ್ಯಕ್ಷಗಿರಿ: ಕರ್ನಾಟಕ ಹಾಲು ಮಹಾಮಂಡಲದ (ಕೆಎಂಎಫ್) ಅಧ್ಯಕ್ಷ ಸ್ಥಾನ ಸಿಕ್ಕರೂ ಸಂತೋಷ, ಸಿಗದಿದ್ದರೇ ದುಃಖ ಇಲ್ಲ. ನನ್ನ ಜೀವನದಲ್ಲಿ ದುಃಖವೆಂಬುದೇ ಇಲ್ಲ. ಸದಾ ನಗುವುದೇ ನನ್ನ ಜೀವನ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನೈಸ್ ವಿಚಾರದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ರೈತರ ಹಿತ ಕಾಯಲಿಕ್ಕಾಗಿ ಹೋರಾಟ ಮಾಡುತ್ತಿಲ್ಲ. ಬದಲಿಗೆ ರಾಜಕೀಯ ಸ್ವಾರ್ಥ ಸಾಧನೆಗಾಗಿ ಹೋರಾಟ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಸದಾನಂದಗೌಡರು ಕಿಡಿಕಾರಿದ್ದಾರೆ.